# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಶಿಡ್ಲಘಟ್ಟ

## ಸಿ ಸಿ ನಂ.1470/2021

**ಪಿ ಡಬ್ಲ್ಯು.. 1**

ಪ್ರಮಾಣವಚನದ ನಂತರದ ದಿಃ **06.07.2024**

ಮುಂದುವರಿ ಪಾಟೀ ಸವಾಲು ಆರೋಪಿ ಪರ ಎ ಕೆ ವಕೀಲರಿಂದ -

ಆರೋಪಿಗೆ ನಾನು ಮೊದಲ ಬಾರಿಗೆ ಆತನ ತಾಯಿ ಆಸ್ಪತ್ರೆಗೆ ದಾಖಲಾಗಿದ್ದಾರೆಂದು ಹೇಳಿ ಚಿಕಿತ್ಸೆಗೆಂದು ಹಣ ಕೇಳಿದಾಗ ನಾನು **5** ಲಕ್ಷ ಹಣವನ್ನು ನೀಡಿರುತ್ತೇನೆ. ನಂತರ **2** ನೇ ಬಾರಿಯೂ ಸಹ ಆತನ ತಾಯಿ ಚಿಕಿತ್ಸೆಗೆಂದು ಕೇಳಿದಾಗ **15** ಲಕ್ಷ ಹಣವನ್ನು ನೀಡಿರುತ್ತೇನೆ ನಂತರ ಆರೋಪಿಯ ತಾಯಿ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿ ಬಂದ ನಂತರ ನಾನು ದೇವನಹಳ್ಳಿಯ ನಂಜೇಗೌಡ ರವರ ಮನೆಯಲ್ಲಿ **10** ಲಕ್ಷ ಹಣವನ್ನು ಆರೋಪಿಗೆ ನೀಡಿರುತ್ತೇನೆ. ಸದರಿ ಹಣಕ್ಕೆ ನಾನು ಯಾವುದೇ ದಾಖಲೆಯನ್ನು ಆರೋಪಿಯಿಂದ ಬರೆಸಿಕೊಂಡಿರುವುದಿಲ್ಲ ಸಾಕ್ಷಿ ಮುಂದುವರೆದು **3** ನೇ ಬಾರಿ **10** ಲಕ್ಷ ಹಣವನ್ನು ಪಡೆದುಕೊಂಡಾಗ ಆರೋಪಿ ಒಂದು ವಾರದಲ್ಲೇ ಕ್ರಯ ಪತ್ರವನ್ನು ಮಾಡಿಕೊಡುತ್ತೇನೆಂದು ಹೇಳಿದ್ದರಿಂದ ನಾನು ಸದರಿ **30** ಲಕ್ಷ ಹಣಕ್ಕೆ ಯಾವುದೇ ದಾಖಲೆಗಳನ್ನು ಬರೆಸಿಕೊಳ್ಳಲಿಲ್ಲ ಎಂದು ಹೇಳುತ್ತಾರೆ.

**2.** ನಂಜೇಗೌಡರು ನನ್ನ ಸಂಬಂಧಿಕರು ಎಂದರೆ ಸರಿಯಲ್ಲ ಸಾಕ್ಷಿ ನನಗೆ ಪರಿಚಿತರು ಹಾಗೂ ಸ್ನೇಹಿತರು ಎಂದು ಹೇಳುತ್ತಾರೆ. ಸದರಿ **30** ಲಕ್ಷ ಹಣ ನನ್ನದೇ ಆಗಿರುತ್ತದೆ. ಬೇರೆ ಯಾರಿಗೂ ಸಂಬಂದ ಪಟ್ಟಿದ್ದಲ್ಲ. ನಾನು ಆರೋಪಿಗೆ ಮೂರು ಬಾರಿ ಹಣವನ್ನು ನೀಡಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿ ನಂಜೇಗೌಡರು ಸ್ನೇಹಿತರಾಗಿದ್ದರಿಂದ ಅವರ ಹೆಸರನ್ನು ಬಳಸಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. **30** ಲಕ್ಷ ಹಣವನ್ನು ನಾನು ಒಟ್ಟಿಗೆ ಆರೋಪಿಗೆ ನೀಡಿರುವುದಿಲ್ಲ ಮೇಲೆ ಹೇಳಿದ ಹಾಗಿ ಮೂರು ಬಾರಿ ನೀಡಿರುತ್ತೇನೆ.

**3.** ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಿ ಸದರಿ ದಾಖಲೆಯಲ್ಲಿ ನಾನು ದೊಡ್ಡಬಳ್ಳಾಪುರ ನ್ಯಾಯಾಲಯದಲ್ಲಿ ಒಂದು ಚೆಕ್ ಬೌನ್ಸ್ ಪ್ರಕರಣವನ್ನು ಇದೇ ಆರೋಪಿ ಮೇಲೆ ಹೂಡಿದ್ದೇನೆಂದರೆ ಸಾಕ್ಷಿ ಹೌದು ಎಂದು ಹೇಳುತ್ತಾರೆ.

ಪಿಸಿಆರ್ ನಂ.**129/2018** ಆದೇಶ ಪುಟಗಳು ಮತ್ತು ದೂರಿನ ಅರ್ಜಿಯನ್ನು ಕ್ರಮವಾಗಿ ನಿಡಿ.**3** ಮತ್ತು **4** ಎಂದು ಗುರುತಿಸಲಾಯಿತು. ಸದರಿ ಪ್ರಕರಣವನ್ನು ನಾನು ಆರೋಪಿಯ ಮೇಲೆ ಇದೇ ಪ್ರಕರಣದಲ್ಲಿರುವ ಕರಾರು ಪತ್ರಕ್ಕೆ ಸಂಬಂದಪಟ್ಟಂತೆ ಹೂಡಿರುತ್ತೇನೆ. ಸಾಕ್ಷಿ ಸದರಿ ಪ್ರಕರಣದಲ್ಲಿರುವ ಚೆಕ್ಕನ್ನು ಆರೋಪಿ ಕರಾರು ಪತ್ರದಲ್ಲಿರುವ ಮುಂಗಡ ಹಣವನ್ನು ವಾಪಸ್ಸು ನೀಡುವುದಕ್ಕೋಸ್ಕರ ನೀಡಿ ನನ್ನಿಂದ ಕರಾರು ಪತ್ರವನ್ನು ವಾಪಸ್ಸು ಪಡೆದುಕೊಂಡಿರುತ್ತಾರೆ. ಸಾಕ್ಷಿ ಮುಂದುವರೆದು ಆರೋಪಿ ಕರಾರು ಪತ್ರಕ್ಕೆ ಸಂಬಂದಪಟ್ಟಂತೆ ಮೊದಲು ಒಂದು ಚೆಕ್ಕನ್ನು ನನಗೆ ನೀಡಿದರು ಸದರಿ ಚೆಕ್ಕನ್ನು ನಾನು ದೊಡ್ಡಬಳ್ಳಾಪುರದ ನ್ಯಾಯಾಲಯದಲ್ಲಿ ಸಲ್ಲಿಸಿದೆ. ಸದರಿ ಪ್ರಕರಣದಲ್ಲಿ ನಾನು ಕರೋನ ಸಮಯವಾದ್ದರಿಂದ ಹಾಜರಾಗಲು ಸಾಧ್ಯವಾಗದೇ ಇದ್ದು ಮತ್ತು ಆರೋಪಿ ಮಧ್ಯಸ್ಥರ ಮುಖಾಂತರ ಬೇರೆ ಚೆಕ್ಕನ್ನು ನೀಡುತ್ತೇನೆಂದು ಹೇಳಿದ್ದರಿಂದ ಸದರಿ ಪ್ರಕರಣ ವಜಾ ಗೊಂಡಿರುತ್ತದೆ. **2** ನೇ ಬಾರಿ ಆರೋಪಿ ಈ ಪ್ರಕರಣದಲ್ಲಿರುವ ಚೆಕ್ಕನ್ನು ನೀಡಿ ಕರಾರು ಪತ್ರವನ್ನು ವಾಪಸ್ಸು ಪಡೆದುಕೊಂಡಿರುತ್ತಾರೆ.

**4.** ಸದರಿ ಪ್ರಕರಣದಲ್ಲಿ ನಾನು ಸತತವಾಗಿ ಗೈರು ಹಾಜರಾದ್ದರಿಂದ ಪ್ರಕರಣ ವಜಾ ಗೊಂಡಿರುತ್ತದೆಂದರ ಸರಿಯಲ್ಲ. ಸಾಕ್ಷಿ ಮುಂದುವರೆದು ಕರೋನ ಇದ್ದುದ್ದರಿಂದ ಸದರಿ ಪ್ರಕರಣಕ್ಕೆ ಹಾಜರಾಗಲು ಆಗಲಿಲ್ಲ ಎಂದು ಹೇಳುತ್ತಾರೆ. ಸದರಿ ಗೈರು ಹಾಜರಾತಿಗೆ ಸಂಬಂದಪಟ್ಟಂತೆ ನಾನು ಈ ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಮೇಲಿನ ವಿಚಾರಕ್ಕೂ ಈ ಚೆಕ್ಕಿನ ವ್ಯವಹಾರಕ್ಕೆ ಸಂಬಂದಪಟ್ಟದಲ್ಲದೇ ಇರುವುದರಿಂದ ನಾನು ಸದರಿ ವಿಚಾರಗಳನ್ನು ನಾನು ನನ್ನ ಮುಖ್ಯ ವಿಚಾರಣೆಯಲ್ಲಾಗಲೀ ಪಿರ್ಯಾದಿನಲ್ಲಾಗಲೀ ಹೇಳಿಲ್ಲ.

**5.** ವೆಂಕಟೇಶ್ ಮತ್ತು ಉಮೇಶ್ ಎನ್ನುವರು ನನ್ನ ಸ್ನೇಹಿತರು ಎಂದರೆ ಸರಿಯಲ್ಲ. ಸದರಿಯವರ ಜೊತೆ ನಾನು ಸಣ್ಣಪುಟ್ಟ ಜಮೀನು ವ್ಯವಹಾರಗಳು, ಫೈನಾನ್ಸ್ ವ್ಯವಹಾರಗಳನ್ನು ಮಾಡಿಕೊಂಡು ಇದ್ದೆ ಎಂದರೆ ಸರಿಯಲ್ಲ. ಸದರಿ ಉಮೇಶ್ ರವರಿಂದ ಆರೋಪಿ ಹಣವನ್ನು ಪಡೆದುಕೊಂಡಿದ್ದು ಅವರಿಗೆ ಚೆಕ್ಕನ್ನು ನೀಡಿರುತ್ತಾರೆ ಸದರಿ ಚೆಕ್ಕನ್ನು ಉಮೇಶ್ ರವರು ನನ್ನ ಮುಖಾಂತರ ಬ್ಯಾಂಕಿಗೆ ಸಲ್ಲಿಸಿ ಈ ಪ್ರಕರಣವನ್ನು ಹೂಡಿದ್ದಾರೆಂದರೆ ಸರಿಯಲ್ಲ. ಅಕ್ರಮ ಲಾಭ ಪಡೆಯುವುದಕ್ಕೋಸ್ಕರ ಸದರಿ ವೆಂಕಟೇಶ್ ಮತ್ತು ಉಮೇಶ್ ರವರು ಚೆಕ್ಕುಗಳನ್ನು ನ್ಯಾಯಾಲಯಲಕ್ಕೆ ಸಲ್ಲಿಸಿ ಹಣ ಪಡೆದುಕೊಂಡವರಿಗೆ ತೊಂದರೆ

ನೀಡುತ್ತಿದ್ದೇವೆಂದರೆ ಸರಿಯಲ್ಲ. ಆರೋಪಿ ಉಮೇಶ್ ರವರ ಬಳಿ ಹಣವನ್ನು ತೆಗೆದುಕೊಂಡು ಅದನ್ನು ತಿರುವಳಿ ಮಾಡಿದಾಗ ಈ ಪ್ರಕರಣದ ಚೆಕ್ಕನ್ನು ಕೇಳಿದ್ದು ಸದರಿ ಚೆಕ್ಕು ಕಳೆದು ಹೋಗಿರುತ್ತದೆಂದು ಆರೋಪಿಗೆ ಒಂದು ಛಾಪಾ ಕಾಗದದಲ್ಲಿ ಕಳೆದು ಹೋಗಿರುವ ಚೆಕ್ಕು ಸಿಕ್ಕಿದರೆ ಮಳಿ ನೀಡುತ್ತೇನೆಂದು ಬರೆದುಕೊಟ್ಟಿರುತ್ತೇನೆಂದರೆ ಸರಿಯಲ್ಲ. ಈ ಪ್ರಕರಣದಲ್ಲಿರುವ ಚೆಕ್ಕಿಗೆ ಸಂಬಂದಪಟ್ಟಂತೆ ಆರೋಪಿ ದಿ:**20.05.2015** ರಂದು ಬ್ಯಾಂಕಿಗೆ ಅರ್ಜಿಯನ್ನು ಸಲ್ಲಿಸಿ ಪೇಮೆಂಟನ್ನು ಅವರ ಖಾತೆಯಿಂದ ನಿಲ್ಲಿಸಿರುತ್ತಾರೆಂದರೆ ನನಗೆ ಅದರ ಬಗ್ಗೆ ಗೊತ್ತಿಲ್ಲ. ನಾನು ಯಾವುದೇ ಪೈನಾನ್ಸ್ ವ್ಯವಹಾರವನ್ನು ಮಾಡಿರುವುದಿಲ್ಲ.

**6.** ನಿ.ಪಿ.**2** ರಲ್ಲಿರುವ ವಿಚಾರಗಳಿಗೆ ಸಂಬಂದಪಟ್ಟಂತೆ ಆರೋಪಿ ಪರ ವಕೀಲರು ಓದಿ ಹೇಳಿದಾಗ ಸಾಕ್ಷಿ ಸದರಿ ವಿಚಾರಗಳನ್ನು ನಾನು ನನ್ನ ವಕೀಲರಿಗೆ ಹೇಳಿರಲಿಲ್ಲ ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರೆದು ನನಗೆ ಇಂಗ್ಲಿಷ್ ಓದಲು ಬರುವುದಿಲ್ಲ ಎಂದು ನುಡಿಯುತ್ತಾರೆ. ನಿ.ಪಿ.**2** ರಲ್ಲಿರುವ ವಿಚಾರಗಳನ್ನು ನನಗೆ ಸರಿಯಾಗಿ ತಿಳಿದಿಲ್ಲ ವಕೀಲರು ಏನು ಬರೆದಿದ್ದರು ಎಂದು ನನಗೆ ಗೊತ್ತಿಲ್ಲ. ನಾನು ಅಕ್ರಮ ಲಾಭ ಪಡೆಯುವ ಸಲುವಾಗಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**7.** ನಿ.ಪಿ.**2** ಬ್ಯಾಂಕಿನಿಂದ ನೀಡಿರುವಂತಹ ಮೆಮೋ ಆಗಿರುವುದಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಬ್ಯಾಂಕಿನಿಂದಲೇ ನೀಡಿರುತ್ತಾರೆಂದು ಹೇಳುತ್ತಾರೆ. ನೋಟೀಸು ಆರೋಪಿಗೆ ಜಾರಿಯಾಗಿರುವುದಿಲ್ಲ ನಿ.ಪಿ.**5** ನ್ನು ಅಂಚೆ ಕಛೇರಿಯವರ ಜೊತೆ ಸೇರಿ ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ನಿ.ಪಿ.**1** ಚೆಕ್ಕನ್ನು ಆರೋಪಿ ನನಗೆ ನೀಡಿರುವುದಿಲ್ಲ ಹಾಗಾಗಿ ಆರೋಪಿ ನನಗೆ ಹಣವನ್ನು ನೀಡಲು ಬಾದಸ್ಥರಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಲಾಯಿತು.)

ಓ ಹೇ ಕೇ ಸ ಇದೆ.

**Sd/-**

ಪ್ರಧಾನ ಸಿ. ನ್ಯಾ. ಮತ್ತು
ಜೆಎಂಎಫ್, ಶಿಡ್ಲಘಟ್ಟ